ಅವರ ವಾಕ್ಯಗಳನ್ನೆತ್ತಿ ತೋರಿಸಿ ಎಲ್.ಎಸ್.ಎಸ್. ವಿಶ್ಲೇಷಿಸುತ್ತಾರೆ. ಅವರ ವಿಮರ್ಶೆ ಸದಾ ಪಠ್ಯಗಳಿಂದ ಆಧಾರಗಳನ್ನು ಎತ್ತಿ ತೋರಿಸುತ್ತಾ ಇರುತ್ತದೆ. 'ಗ್ರೀಕ್ ನಾಗರಿಕತೆ, ಸಂಸ್ಕೃತಿಗಳ ವಿರಾಟ್ ಸ್ವರೂಪ ನಮಗೇಕೆ ಮಾದರಿ ಆಗಬಾರದು?' ಎಂಬ ಬಿ.ಎಂ.ಶ್ರೀ. ಅವರ ವಿಚಾರದ ಹಿನ್ನೆಲೆಯಲ್ಲಿ ಎಲ್.ಎಸ್.ಎಸ್. ಗ್ರೀಕ್ ಸಾಹಿತ್ಯವನ್ನು ಕನ್ನಡ ಹಾಗೂ ಭಾರತೀಯ ಚಿಂತನೆಗಳ ಒರೆಗೆ ಹಚ್ಚುತ್ತಾರೆ. ಗ್ರೀಕ್ ದಾರ್ಶನಿಕ ಸ್ವರೂಪದಲ್ಲಿ ವ್ಯಕ್ತಿ ಮತ್ತು ಸಮಾಜಗಳ ಮುಖಾಮುಖಿಯಲ್ಲಿ ಸತ್ಯದರ್ಶನವಾಗುತ್ತದೆ ಎಂಬ ನಂಬಿಕೆ ಅಡಗಿದೆ. ಆ ಗ್ರೀಕ್ ನಂಬಿಕೆಯನ್ನು ಎಲ್.ಎಸ್.ಎಸ್. ಭಾರತೀಯ ಹಾಗೂ ಕನ್ನಡ ಸಂದರ್ಭಗಳಲ್ಲಿ ಕುವೆಂಪು ಮೊದಲಾದವರ ಸಾಹಿತ್ಯದ ತೌಲನಿಕ ವಿಶ್ಲೇಷಣೆಗಳಲ್ಲಿ ಪರೀಕ್ಷಿಸುತ್ತಾರೆ.

ಯುರಿಪಿಡೀಸ್‌ನ ಸಂದರ್ಭದಲ್ಲಿ ಅವರು 'ವಿಮೆನ್ ಆಫ್ ಟ್ರಾಯ್'ನಲ್ಲಿರುವ ಯುದ್ಧ ವಿರೋಧದ ನೆಲೆಯನ್ನು ವಿಶೇಷವಾಗಿ ಪ್ರಸ್ತಾಪಿಸಿ ವಿವರಿಸುತ್ತಾರೆ. ಹೆಣ್ಣಿನ ಸಂಕಷ್ಟ ಆತನಿಗೆ ಹೇಗೆ ಸದಾ ಕಾಡುವ ವಸ್ತು ಎಂದು ತಮ್ಮ ವಿಮರ್ಶೆಯಲ್ಲಿ ಕಾಣಿಸುತ್ತಾರೆ. ಇದು ಶೇಷಗಿರಿರಾಯರ ವಿಮರ್ಶಾ ನಿಲುವುಗಳನ್ನು ಅರಿಯಲು ಕೂಡಾ ಸಹಕಾರಿ. ಪ್ರೊ. ಎಸ್.ವಿ. ರಂಗಣ್ಣನವರು 'ವಿವೇಚನಾ ಪ್ರಮುಖವಾದ ಬುದ್ಧಿಶಕ್ತಿಯೇ ಯೂರಿಪಿಡೀಸ್ ನಿರಂತರವಾಗಿ ಉಪಯೋಗಿಸುತ್ತಿದ್ದ ಆಯುಧ' ಎಂದರೆ, ಎಲ್.ಎಸ್.ಎಸ್. ಅವರು 'ಕಾಲಜ್ಞರು, ದೈವಜ್ಞರುಗಳ ವಿಷಯದಲ್ಲಿ ಯೂರಿಪಿಡೀಸನದು ಸಂಪೂರ್ಣವಾಗಿ ವೈಚಾರಿಕ ನಿಲುವು' ಎನ್ನುತ್ತಾರೆ.

ಮಹೋಪಮೆ ಹೋಮರನ ಸೃಷ್ಟಿ ನಿಜ. ಆ ಅಲಂಕಾರವನ್ನು ಬಳಸುವ ಕುವೆಂಪು ತಮ್ಮ ದರ್ಶನವನ್ನು ಮಹಾಕಾವ್ಯದ ಮೂಲಕ ತೋರಿಸುವ ಕ್ರಮಕ್ಕೂ ಹೋಮರನ ಅಭಿವ್ಯಕ್ತಿಯ ಕ್ರಮಕ್ಕೂ ಇರುವ ವ್ಯತ್ಯಾಸ ಎಲ್.ಎಸ್.ಎಸ್. ಅವರ ಪ್ರಮುಖ ಆಕರ್ಷಣೆ. ಗ್ರೀಕರ ಸಾಹಿತ್ಯ, ತತ್ವಶಾಸ್ತ್ರಗಳ ಮೂಲಕ ಬೆಳೆದ ಪಾಶ್ಚಾತ್ಯ ಚಿಂತನೆ ಗ್ರಹಿಸುವಂತೆ, 'ಅಸಹಾಯಕ ಸ್ಥಿತಿಯಲ್ಲಿ ಮನುಷ್ಯನನ್ನು ಪೊರೆಯುವ ಶಕ್ತಿ ಯಾವುದು?' ಎಂಬ ತಾತ್ವಿಕ ಪ್ರಶ್ನೆಯೊಂದನ್ನು ವಿಮರ್ಶೆಯಲ್ಲಿ ವಿಶ್ಲೇಷಣೆ, ವಿವರಣೆಗಳ ಅಂಗವಾಗಿ



ಶೇಷಗಿರಿ ರಾವ್; ಭಾರತಿ ಶೇಷಗಿರಿ ರಾವ್ ದಂಪತಿ

ಎಲ್.ಎಸ್.ಎಸ್. ಅವರು ಕೇಳಿಕೊಳ್ಳುತ್ತಾರೆ. ಪ್ರೇಮ, ಕರುಣೆಗಳು ಪಾಶ್ಚಾತ್ಯ ಚಿಂತನೆಯಲ್ಲಿ ಮಾನವನನ್ನು ಪೊರೆಯುವ ಗುಣಗಳು. ಭಾರತದಲ್ಲಾದರೆ ಅದು ಮನುಷ್ಯನ ಒಳಸತ್ವ, ಅವನು ಪಾಲಿಸಿದ ಧರ್ಮ ಹಾಗೂ ತೋರಿದ ಕರುಣೆಗಳು ಪೊರೆಯುವ ಶಕ್ತಿಯನ್ನು ಹೊಂದಿದೆ ಎಂಬುದನ್ನು ರೆಟರಿಕ್ ಆಗಿ ಕೇಳಿದ ತಮ್ಮದೇ ಪ್ರಶ್ನೆಗೆ ಉತ್ತರ ರೂಪದಲ್ಲಿ ವಿವರಿಸುತ್ತಾರೆ. ಭಾರತೀಯ ಮತ್ತು ಪಾಶ್ಚಿಮಾತ್ಯ ತಾತ್ವಿಕ ದರ್ಶನಗಳನ್ನು ಸಾಹಿತ್ಯದ ಮೂಲಕ ಜೀವನಾನುಭವವಾಗಿ ಪರಿವರ್ತಿಸಿ ವಿವರಿಸುವುದರಲ್ಲೂ ಎಲ್.ಎಸ್.ಎಸ್. ಅವರು ವಿಶೇಷ ಆಸಕ್ತಿ ವಹಿಸುತ್ತಾರೆ.

ಗ್ರೀಕ್ ಸಾಹಿತ್ಯದಲ್ಲಿ ಈಸ್ಕಿಲಸ್ ತಿಳಿಸುವ; ಮನುಷ್ಯ ಪ್ರತಿಪಾದಿಸಬೇಕಾದ ನೈತಿಕ ಹೊಣೆ ಮತ್ತು ಜೀವಪರ ಮೌಲ್ಯಗಳನ್ನು ವಿವರಿಸುವುದರಲ್ಲಿ ಎಲ್.ಎಸ್.ಎಸ್. ತಳೆಯುವ ಆಸಕ್ತಿ ಅವರ ವಿಮರ್ಶಾ ನಿಲುವಿನ ಪ್ರತೀಕ. ಈಸ್ಕಿಲಸ್ ಯುದ್ಧದ ವಿನಾಶ ಸ್ವರೂಪದ ಮೇಲೆ ನೀಡುವ ಒತ್ತು ಎಲ್.ಎಸ್.ಎಸ್. ವಿವರಿಸಬಯಸುವ ಇನ್ನೊಂದು ತತ್ವ. ಹೂಬ್ರಿಸ್‌ಗೆ (ಪಾಪಕೃತ್ಯ) ಶಿಕ್ಷೆ ಇದೆ ಎಂಬುದನ್ನು ಈಸ್ಕಿಲಸ್ ನಂಬುತ್ತಾನೆ. ಆದರೆ ದೊಡ್ಡವರು ಮಾಡುವ ತಪ್ಪಿನಿಂದಾಗಿ (ಹೋಬ್ರಿಸ್‌ನಿಂದಾಗಿ) ಸಾಮಾನ್ಯ ಜನರು ಹಿಂಸೆಯನ್ನು ಅನುಭವಿಸಬೇಕಾಗಿ ಬರುವ, ಇನ್ನಿಲ್ಲದಂತೆ ಸಂಕಷ್ಟಕ್ಕೆ ಒಳಗಾಗುವ ವಿಪರ್ಯಾಸ ಈಸ್ಕಿಲಸ್‌ನ ಹಾಗೆ